

ವಾರಗಳಲ್ಲಿ ದಷ್ಟಪುಷ್ಟವಾಗಿ ಬೆಳೆದು ಸಿಂಹದಂತೆ ಕ್ಯಾಂಪಸ್ ತುಂಬಾ ಹೆಜ್ಜೆ ಹಾಕುತ್ತಿತ್ತು. ಅದನ್ನು ಎಲ್ಲರೂ ಮುದ್ದು ಮಾಡುತ್ತಿದ್ದರು. ಆಶ್ಚರ್ಯಕರ ವಿಷಯವೆಂದರೆ ಕೆಲವು ತಿಂಗಳ ಹಿಂದೆ ನಾಯಿಯನ್ನು ವಾಚಾಮಗೋಚರ ಬೈಯುತ್ತಿದ್ದ ಸಹೋದ್ಯೋಗಿಗಳು ಮೋತಿಯ ಬಗ್ಗೆ ಮೆದುಧೋರಣೆ ತಳೆದರು. ಪ್ರೀತಿಯೋ, ಅಧಿಕಾರಿಯನ್ನು ಮೆಚ್ಚಿಸಲು ಮುದ್ದುಮಾಡುತ್ತಿದ್ದರೋ ಕಾಣೆ. ನಾನೂ ಪ್ರತಿದಿನ ವಿಷ್ ಮಾಡುತ್ತಿದ್ದೆ.

ಕೆಲವು ತಿಂಗಳುಗಳಲ್ಲಿ ಮತ್ತೆರಡು ನಾಯಿಗಳು ನಮ್ಮ ಕ್ಯಾಂಪಸ್ ಸೇರಿಕೊಂಡವು. ವಿಸ್ತಾರವಾದ ಪ್ರದೇಶದಲ್ಲಿ ನಾಯಿಗಳು ಕಿತ್ತಾಡುತ್ತ ಕಾರ್ಮಿಕರ ಮೇಲೆ ದಾಳಿ ಮಾಡುತ್ತಿದ್ದವು. ಅವುಗಳ ಉಪಟಳ ಹೆಚ್ಚಾದಂತೆ ತುರ್ತು ಸಭೆ ನಡೆಯಿತು. ನಾಯಿಗಳನ್ನು ಹಿಡಿಯುವ ತಂತ್ರದ ಬಗ್ಗೆ ದೀರ್ಘ ಚರ್ಚೆ ಆರಂಭವಾಯಿತು. ಒಬ್ಬರು ನಾಯಿಗಳಿಗೆ ಹುಚ್ಚು ಹಿಡಿದಿರಬಹುದು ಎಂದರು. ಪ್ರಾಣಿ ದಯಾಸಂಘದ ಸದಸ್ಯರಾಗಿದ್ದ ಮತ್ತೊಬ್ಬರು, ನಾಯಿಗಳಿಗೆ ಭಯ, ಹಸಿವು ಅಥವಾ ಪೆಟ್ಟಾಗಿರಬಹುದು. ಹೊರವಲಯದಲ್ಲಿ ಚಿರತೆಗಳ ಹಾವಳಿ ಹೆಚ್ಚು, ನಾಯಿಗೆ ಚಿರತೆಗಳ ಭಯವಿರಬಹುದು ಎಂದು ಸಮರ್ಥಿಸಿದರು. ಇದು ನಾಯಿ ಅಲ್ಲ, ಕಾಡು ನಾಯಿ ಎಂದು ಹಲ್ಲೆಗೊಳಗಾದ ವ್ಯಕ್ತಿ ರೋಷದಿಂದ ಹೇಳಿದರು. ಕೊನೆಯಲ್ಲಿ ಯಾರಾದರೂ ನಾಯಿ ಹಿಡಿಯುವ ವ್ಯಕ್ತಿಯನ್ನು ಕರೆಸಿ ನಾಯಿಗಳಿಗೆ ಯಾವುದೇ ಅಪಾಯವಾಗದಂತೆ ಹಿಡಿಸಬಹುದೆಂದು, ಅವಕ್ಕೂ ಮೋತಿಯಂತೆ ವ್ಯಕ್ತಿತ್ವ ವಿಕಸನ ತರಬೇತಿ ಕೊಡಿಸಿ ಕರೆತರಬಹುದೆಂಬ ತೀರ್ಮಾನಕ್ಕೆ ಎಲ್ಲರೂ ತಲೆಯಾಡಿಸಿದರು.

ಮಧ್ಯಾಹ್ನದ ಹೊತ್ತಿಗೆ ಟಾಟಾ ಇನೋವಾದಲ್ಲಿ ಕಣ್ಣಿಗೆ ಕಪ್ಪು ಕನ್ನಡಕ ಧರಿಸಿದ ಕುಳ್ಳಗಿನ ವ್ಯಕ್ತಿಯೊಬ್ಬ ಬಂದ. ಅವನ ಜೊತೆಯಲ್ಲಿ ಇಬ್ಬರು ಸಹಾಯಕರು. ಕಾರಿನಿಂದ ಒಂದೊಂದೇ ಸಾಮಗ್ರಿಗಳನ್ನು ತೆಗೆದರು. ಬಲೆ, ಬಂದೂಕು, ಪಟಾಕಿಗಳು. ಕೈಗಳಿಗೆ, ಕಾಲು ಮಂಡಿಗಳಿಗೆ, ರಬ್ಬರ್ ರಕ್ಷಾಕವಚ ತೊಟ್ಟು, ತಲೆಗೆ ಹೆಲ್ಮೆಟ್ ಧರಿಸಿ, ಬೇಟೆಗಾರಂತೆ ಕಂಡರು. ದೂರದಿಂದ ನೋಡುತ್ತಿದ್ದ ನಮಗೆ, ಇವರು ಬಂದದ್ದು ನಾಯಿಗಳನ್ನು ಹಿಡಿಯಲೋ ಅಥವಾ ಹಿಡಿಯಲೋ ಎಂದು ಸಂಶಯವಾಯಿತು.

ಹದಿನಾರು ಎಕರೆ ಪ್ರದೇಶ, ಸೊಂಪಾಗಿ ಹರಡಿ ಎತ್ತರ ಬೆಳೆದ ಹುಲ್ಲು, ಆಕಾಶ ಚುಂಬಿಸುವ ವಿವಿಧ ಮರಗಳು. ಪಟಾಕಿ ಸಿಡಿಸಿದರು, ಎಲ್ಲೆಂದರಲ್ಲಿ ಲಕ್ಷ್ಮಿಸರ ಪಟಾಕಿ ಎಸೆದರು, ಆಕಾಶದಲ್ಲಿ ಗುಂಡು ಹಾರಿಸಿದರು. ನಮಗೆ ಯಾವುದೋ ಯುದ್ಧವೋ ಅಥವಾ ಚಲನಚಿತ್ರದ ಶೂಟಿಂಗೋ ಎನಿಸುತ್ತಿತ್ತು. ಪ್ರಾಣಿ ದಯಾಸಂಘದ ಸದಸ್ಯರು ಪ್ರಾಣಿಯನ್ನು ಬೆದರಿಸಬಾರದು, ಗಾಯಗೊಳಿಸಬಾರದು ಎಂದು ಆಜ್ಞೆ ನೀಡಿದರು.

ದೂರದಲ್ಲಿ ನಾಯಿಗಳು ಬೊಗಳುವುದನ್ನು ಕೇಳಿಸಿಕೊಂಡ ಅವರು, ದೊಡ್ಡ ಬಲೆ ಬೀಸಿದರು. ನಾಯಿಗಳು ಬಲೆಗೆ ಬಿದ್ದವು. ಒಬ್ಬರಿಗೊಬ್ಬರು ಕೈ ಕುಲುಕಿಕೊಂಡರು, ಕ್ರಿಕೆಟ್ ಆಟದಲ್ಲಿ ಸಿಕ್ಸರ್ ಬಾರಿಸಿದಾಗ ಕೈ ಮೇಲೆತ್ತುವಂತೆ ಕೈಗಳನ್ನು ಮೇಲೆತ್ತಿ ಆಡಿಸಿದರು.

ಬಲೆಯಲಿದ್ದ ನಾಯಿಮರಿ ಬಾಲ ಆಡಿಸುತ್ತ ಅವರ ಕಾಲು ನೆಕ್ಕಿತು. ಗಾಬರಿ ಆದ ಅವರು ಎದ್ದು ಬಿದ್ದು ಓಡಿದರು. ಸ್ವಲ್ಪ ದೂರದಲ್ಲಿ ನಿಂತುಕೊಂಡ ಅವರಿಗೆ ಕೂಡ ನಗು ತಡೆಯಲು ಆಗಲಿಲ್ಲ.

ಶಿಬಿರದಿಂದ ವಾಪಸಾದ ಮೂರು ನಾಯಿಗಳಿಗೆ ಹೆಸರು ಸೂಚಿಸುವಂತೆ ಕಂಪನಿ ಮುಖ್ಯಸ್ಥರು ಇಮೇಲ್ ಕಳುಹಿಸಿದರು. ಕೆಲವರು ತಮಗೆ ತಿಳಿದ ಹೆಸರುಗಳನ್ನು ಸೂಚಿಸಿದರು, ಕೆಲವರು ಗೂಗಲ್ ಮೊರೆ ಹೋದರು. ಮತ್ತೆ ಕೆಲವರು ಸಹಸ್ರನಾಮಗಳ ಹುಡುಕಾಟದಲ್ಲಿ ಮುಳುಗಿದರು. ನಂತರ ಮುಖ್ಯಸ್ಥರೇ ಸೆರಾ, ಚಾಪ್ಲಿನ್, ಲಲಿ ಎಂದು ಕರೆಯುವಂತೆ ಮೌಖಿಕ ಆದೇಶ ಹೊರಡಿಸಿದರು.

ಅದೇಕೋ ಏನೋ ನನಗೆ ಯಾವ ನಾಯಿಗೆ ಯಾವ ಹೆಸರು ಎಂದು ಗೊಂದಲ ಉಂಟಾಗಿದ್ದು ಸುಳ್ಳಲ್ಲ. ಅವು ನಮ್ಮ ಕ್ಯಾಂಟೀನ್, ಆಫೀಸ್ ಎಲ್ಲಾ ಕಡೆ ಅಡೆತಡೆ ಇಲ್ಲದೆ ರಾಜಾರೋಷವಾಗಿ ಓಡಾಡುತ್ತಿದ್ದವು. ಮೊದಲು ನಾಯಿ ಪ್ರವೇಶ ಮಾಡಿ ಎಲ್ಲಾ ಕಡೆ ಹೆಜ್ಜೆ ಹಾಕಿದ ನಂತರ ಐದಾರು ನಿಮಿಷದಲ್ಲಿ ಮುಖ್ಯಸ್ಥರು ಬರುತ್ತಿದ್ದರು. ದತ್ತಾತ್ರೇಯರು ಬಂದರೆಂದರೆ ಎಲ್ಲರೂ ಗಪ್‌ಚುಪ್. ಕೆಲಸದಲ್ಲಿ ಮಗ್ನ, ಫೋನಿನಲ್ಲಿ ಗಂಭೀರವಾದ ಮಾತುಕತೆ ಮಾಡುವ ಹಾಗೆ ನಟನೆ. ಕೆಲವೊಮ್ಮೆ ದತ್ತಾತ್ರೇಯರಿಗೆ ಕ್ಯಾಮೆರಾ ಹಾಕಿರುತ್ತಾರೆ, ಹುಷಾರಾಗಿ ಇರಬೇಕೆಂದು ಹಾಸ್ಯ ಮಾಡುತ್ತಿದ್ದುದುಂಟು. ಮಾಲೀಕನ ಮಾತನ್ನು ಚಾಚೂ ತಪ್ಪದೆ ಕೇಳುವ, ಆಜ್ಞೆಯನ್ನು ಪಾಲಿಸುವ ನಿಯತ್ತಿನ ಪ್ರಾಣಿಗಳ ಸಾಲಿನಲ್ಲಿ ನಾವು ಕೂಡ.

ಇವು ನಮ್ಮ ಆತ್ಮೀಯ ಸಹಕೆಲಸಗಾರರೆ? ಹಾಗೆಂದು ತಿಳಿಯಬೇಕೆ? ಗೊತ್ತಿಲ್ಲ. **'Every Dog Has It's Own Day'**.

**ಪ್ರತಿಕ್ರಿಯಿಸಿ: feedback@sudha.co.in**